ವಿಷಯ:- ಮೂಲ್ಕಿ ಮೀನುಗಾರಿಕಾ ಬಂದರಿನ ಅಭಿವೃದ್ಧಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೮೫ (೩೦೮)
ಶ್ರೀ ಸೋಮಪ್ಪ ಸುವರ್ಣ (ಮೂಲ್ಕಿ, ಮೂಡಬಿದ್ರೆ)
ಮಾನ್ಯ ಮೀನುಗಾರಿಕೆ, ಮತ್ತು ಬಂದರು ರಾಜ್ಯ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೀನುಗಾರಿಕೆ ಬಂದರು ಮೂಲ್ಕಿ ಅಭಿವೃದ್ಧಿಯ ಬಗ್ಗೆ ಸರ್ಕಾರವು ಏನು ಕ್ರಮ ಕೈಗೊಂಡಿದೆ;

ಆ) ಈ ಬಂದರಿನ ಬಗ್ಗೆ ಕೇಂದ್ರ ಸರ್ಕಾರದ ಮಂಜೂರು ಹಾಗೂ ಇನ್ನಿತರ ಸಹಾಯದ ಬಗ್ಗೆ ಸರ್ಕಾರವು (ಕ್ರಮ) ಕೈಗೊಂಡಿರುವ ಕ್ರಮವೇನು;

(ಇ) ಈ ಮೀನುಗಾರಿಕೆ ಬಂದರನ್ನು ಕಡಿಮೆ ಖರ್ಚಿನಲ್ಲಿ ಅಭಿವೃದ್ಧಿಪಡಿಸಿರುವುದರಿಂದ ಹೆಚ್ಚಿನ ಮೀನುಗಾರರಿಗೆ ಪ್ರಯೋಜನ ದೊರೆಯುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಈ ಬಂದರಿನ ಅಭಿವೃದ್ಧಿ ಕಾರ್ಯಯಾವ ಹಂತದಲ್ಲಿದೆ?

(ವಸಂತ ಎ. ಸಾಲಿಯಾನ)
(ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು)

(ಅ)ಹಜಮಾಡಿ ಕೋಡಿ (ಮೂಲ್ಕಿ) ಮೀನುಗಾರಿಕೆ ಬಂದರು ಪ್ರದೇಶದ ಸಮುದ್ರ ತೀರಕ್ಕೆ ಬೇಕಾಗಿರುವ ಪೋಷಣಾ ಅನುಕೂಲಗಳನ್ನು ಒಳಗೊಂಡ ಇಳಿದಾಣವನ್ನು ನಿರ್ಮಿಸಲು ೧೦೦ ಲಕ್ಷ ರೂಪಾಯಿಗಳ ಅಂದಾಜು ಪಟ್ಟಿಗೆ ಭಾರತ ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ಕೋರಲಾಗಿದೆ.

ಆ) ಈ ಯೋಜನೆಯ ವೆಚ್ಚವು ೫೦ ಲಕ್ಷ ರೂಪಾಯಿಗಳಿಗೆ ಮೀರಿರುವುದರಿಂದ, ಭಾರತ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯ ಮೇಲೆ ಅವರು ಸದರಿ ಯೋಜನೆಯ ವರದಿಯನ್ನು ಬೆಂಗಳೂರು ಕೇಂದ್ರಿಯ ಕರಾವಳಿ ಮೀನುಗಾರಿಕಾ ತಾಂತ್ರಿಕ ಸಂಸ್ಥೆಯ ನಿರ್ದೇಶಕರವರ ತಾಂತ್ರಿಕ ಪರಿಶೀಲನೆಯನ್ನು ಪಡೆದು ಸಲ್ಲಿಸುವಂತೆ ಸೂಚಿಸಿರುತ್ತಾರೆ ಇದಲ್ಲದೆ, ಕರ್ನಾಟಕ ರಾಜ್ಯದ ಮೀನು ಇಳಿದಾಣ ಕೇಂದ್ರಗಳ ಅವಶ್ಯಕತೆ ಮತ್ತು ಆಗತ್ಯತೆಗಳನ್ನು ನಿರ್ಧರಿಸಿ, ಕ್ರೋಡೀಕೃತ ಪ್ರಸ್ತಾವನೆಯನ್ನು ಸಲ್ಲಿಸಲು ಕೂಡಾ ಭಾರತ ಸರ್ಕಾರದವರು ತಿಳಿಸಿರುವರು. ಭಾರತ ಸರ್ಕಾರದ ಈ ಮೇಲಿನ ಅಭಿಪ್ರಾಯಗಳ ಮೇಲೆ ಕ್ರಮ ಕೈಗೊಂಡು ಮತ್ತೊಮ್ಮೆ ಪ್ರಸ್ತಾವನೆಯನ್ನು ಸದರಿ ಯೋಜನೆಗೆ ಆರ್ಥಿಕ ಸಹಾಯ ಮತ್ತು ಮಂಜೂರಾತಿಯನ್ನು ಪಡೆಯಲು ಭಾರತ ಸರ್ಕಾರವನ್ನು ಸಂಪರ್ಕಿಸಲಾಗುವುದು.

(ಇ)ಹೌದು.

(ಈ) (ಅ) ಮತ್ತು (ಆ) ದಲ್ಲಿದ್ದಂತೆ.

ವಿಷಯ:- ಪ್ರಾಥಮಿಕ ಶಾಲಾ ಉಪಾಧ್ಯಾಯರ ನೇಮಕಾತಿಯಲ್ಲಿ ಮಹಿಳೆಯರಿಗೆ ಆದ್ಯತೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: ೮೬(೬೨೭)
ಶ್ರೀ ಹೆಚ್ ಎಂ. ರೇವಣ್ಣ (ಮಾಗಡಿ)
ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಉಪಾಧ್ಯಾಯರನ್ನು ನೇಮಿಸಿಕೊಳ್ಳುವಲ್ಲಿ ಶೇ.೫೦ನ್ನು ಮಹಿಳೆಯರಿಗೆ ಮಾತ್ರ ಆದ್ಯತೆಯಾಧಾರದ ಮೇಲೆ ನೇಮಕ ಮಾಡಲು ಸರ್ಕಾರದವರು ಪರಿಶೀಲಿಸುವುರೇ;